# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 790 (968) |
| **ಸದಸ್ಯರ ಹೆಸರು** | : | ಕಿಶೋರ್ ಕುಮಾರ್ ಪುತ್ತೂರ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| **ಉತ್ತರಿಸುವ ದಿನಾಂಕ** | : | 15.12.2025 |
| **ಉತ್ತರಿಸುವವರು** | : | ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ 3 ವರ್ಷದಲ್ಲಿ ಕೊಡಗು ಜಿಲ್ಲೆಯ ಸೋಮವಾರಪೇಟೆ ಬೀದಳ್ಳಿ ಚೆಕ್ಪೋಸ್ಟ್ ಮುಖಾಂತರ ಮತ್ತು ದ.ಕ. ಜಿಲ್ಲೆಯ ಕಡಬ ತಾಲ್ಲೂಕಿನ ಕುಕ್ಕೆ ಸುಬ್ರಹ್ಮಣ್ಯದಿಂದ ಕುಮಾರ ಪರ್ವತಕ್ಕೆ ಎಷ್ಟು ಮಂದಿ ಚಾರಣವನ್ನು ಮಾಡಿದ್ದಾರೆ: (ಪ್ರತ್ಯೇಕ ವಿವರ ನೀಡುವುದು);</td><td>ಕೊಡಗು ಜಿಲ್ಲೆಯ ಸೋಮವಾರಪೇಟೆ ಬೀದಳ್ಳಿ ಚೆಕ್‌ಪೋಸ್ಟ್ ಮುಖಾಂತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲ್ಲೂಕಿನ ಕುಕ್ಕೆ ಸುಬ್ರಹ್ಮಣ್ಯದಿಂದ ಕುಮಾರ ಪರ್ವತಕ್ಕೆ ಕಳೆದ ಮೂರು ವರ್ಷಗಳಲ್ಲಿ ಚಾರಣ ಮಾಡಿದ ಚಾರಣಿಗರ ಸಂಖ್ಯೆ ಈ ಕೆಳಕಂಡಂತಿರುತ್ತದೆ.<br><br>
<table>
<tr><th>ವರ್ಷ</th><th>ಬೀದಳ್ಳಿ</th><th>ಗಿರಿಗದ್ದೆ</th><th>ಒಟ್ಟು</th></tr>
<tr><td>2022-23</td><td>2,137</td><td>10,060</td><td>12,197</td></tr>
<tr><td>2023-24</td><td>1,342</td><td>11,281</td><td>12,623</td></tr>
<tr><td>2024-25</td><td>7,887</td><td>10,665</td><td>18,552</td></tr>
</table>
</td></tr>
<tr><td>ಆ)</td><td>ಸದರಿ ಪರ್ವತವನ್ನು ಒಂದೇ ದಿನದಲ್ಲಿ ಚಾರಣ ಪೂರ್ಣಗೊಳಿಸಬೇಕು ಎನ್ನುವ ನಿಯಮವನ್ನು ಯಾವ ದಿನಾಂಕದಿಂದ ಜಾರಿಗೊಳಿಸಲಾಗಿದೆ; ನಿಯಮದ ಪ್ರತಿಯನ್ನು ಒದಗಿಸುವುದು; ಈ ನಿಯಮಕ್ಕೆ ಆಧಾರವಾದ ಯಾವುದೇ ಪರಿಸರ ಅಥವಾ ಸುರಕ್ಷತಾ ಅಧ್ಯಯನ ವರದಿ ಇದ್ದರೆ ಅದರ ಪ್ರತಿಯನ್ನು ಒದಗಿಸುವುದು;</td><td>2024-25 ನೇ ಸಾಲಿನ ದಿನಾಂಕ 05-10-2024 ರಿಂದ ಅರಣ್ಯ ಇಲಾಖೆಯಲ್ಲಿನ ಎಲ್ಲಾ ಚಾರಣ ಮಾರ್ಗಗಳನ್ನು ಅರಣ್ಯ ವಿಹಾರ ಎಂಬ ತಂತ್ರಾಂಶದ ಮೂಲಕ ಆನ್‌ಲೈನ್ ಬುಕ್ಕಿಂಗ್ ವ್ಯವಸ್ಥೆ ಜಾರಿಗೊಳಿಸಿದ್ದು ಆ ದಿನದಿಂದಲೇ ಸುಬ್ರಮಣ್ಯ ಮೂಲಕ ಚಾರಣ ಮಾರ್ಗವನ್ನು ಒಂದೇ ದಿನದಲ್ಲಿ ಚಾರಣ ಪೂರ್ಣಗೊಳಿಸಬೇಕು ಎನ್ನುವ ನಿಯಮವು ಜಾರಿಗೊಂಡಿರುತ್ತದೆ. ದಿನಾಂಕ: 05-06-2024 ರಂದು ನಡೆದ ಕೊಡಗು ಮಾನವ ವನ್ಯಜೀವಿ ಸಂಘರ್ಷ ಉಪಶಮನ ಪ್ರತಿಷ್ಠಾನ ನಿಧಿಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ಬಗ್ಗೆ ತೀರ್ಮಾನಿಸಲಾಗಿದ್ದು, ನಡವಳಿ ಪ್ರತಿಯನ್ನು ಅನುಬಂಧ-1 ರಲ್ಲಿ ಒದಗಿಸಿದೆ.<br><br>ವನ್ಯಜೀವಿಗಳ ಮುಕ್ತ ಸಂಚಾರ ಮತ್ತು ಚಾರಣಿಗರ ಸುರಕ್ಷತಾ ಹಿತದೃಷ್ಟಿಯಿಂದ ನಿಯಮವು ರೂಪಿಸಿರುವುದರಿಂದ ಯಾವುದೇ ಪರಿಸರ ಅಥವಾ ಸುರಕ್ಷತಾ ಅಧ್ಯಯನವನ್ನು ಕೈಗೊಂಡಿರುವುದಿಲ್ಲ.</td></tr>
</table>

Rebad

| ಕ್ರ,ಸಂ | ಪ್ರಶ್ನೆ | ಉತ್ತರ |
|---|---|---|
| ಇ) | ಕುಕ್ಕೆ ಮಾರ್ಗದಿಂದ ಒಂದೇ ದಿನದಲ್ಲಿ ಚಾರಣ ಪೂಣರ್ಗೋಳಿಸುವುದು ಕಷ್ಟ/ ಅಸಾಧ್ಯವೆಂದು ಚಾರಣಿಗರಿಂದ ಎಷ್ಟು ದೂರುಗಳು ಬಂದಿವೆ; ಈ ಬಗ್ಗೆ ತೆಗೆದುಕೊಂಡ ಕ್ರಮವೇನು; ಚಾರಣವನ್ನು ಎರಡು ದಿನಗಳಿಗೆ ಅನುಮತಿಸಲು ಚರ್ಚಿಸಲಾಗಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ವಿವರ ಒದಗಿಸುವದು; ಇಲ್ಲಿ ಚಾರಣ ಮಾಡಲು ಎರಡು ದಿನಗಳಿಗೆ ಅನುಮತಿ ನೀಡಲು ಸರ್ಕಾರಕ್ಕೆ ಇರುವ ಸಮಸ್ಯೆಯೇನು; | ಒಂದೇ ದಿನದಲ್ಲಿ ಚಾರಣ ಪೂರ್ಣಗೊಳಿಸುವುದು ಕಷ್ಟ/ ಅಸಾಧ್ಯವೆಂದು ಚಾರಣಿಗರಿಂದ ಅಂತರ್ಜಾಲದ ಮೂಲಕ 2 ದೂರುಗಳು ಸ್ವೀಕೃತವಾಗಿರುತ್ತದೆ. ಸದರಿ ದೂರುಗಳಿಗೆ ಸಂಬಂಧಿಸಿದ ವಲಯ ಅರಣ್ಯಾಧಿಕಾರಿಯವರು ನೀಡಿರುವ ಹಿಂಬರಹದ ಪ್ರತಿಯನ್ನು **ಅನುಬಂಧ-2** ರಲ್ಲಿ ಒದಗಿಸಿದೆ.<br><br>ಚಾರಣವನ್ನು ಎರಡು ದಿನಗಳಿಗೆ ಅನುಮತಿಸುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ. ಮುಂದುವರೆದು ಚಾರಣವನ್ನು ಎರಡು ದಿನಗಳಿಗೆ ಅನುಮತಿಸಿದ್ದಲ್ಲಿ ಚಾರಣಿಗರಿಗೆ ಊಟದ ವ್ಯವಸ್ಥೆ ಕಲ್ಪಿಸುವುದು ಸಾಧ್ಯವಾಗುವುದಿಲ್ಲ ಮತ್ತು ವನ್ಯಧಾಮದಲ್ಲಿ ರಾತ್ರಿ ತಂಗುವುದು ಚಾರಣಿಗರ ಸುರಕ್ಷತೆಯ ಹಿತದೃಷ್ಟಿಯಿಂದ ಸೂಕ್ತವಲ್ಲ ಹಾಗೂ ರಾತ್ರಿವೇಳೆ ವನ್ಯಪ್ರಾಣಿಗಳ ಮುಕ್ತ ಸಂಚಾರಕ್ಕೆ ತೊಂದರೆಯಾಗುತ್ತದೆ. |
| ಈ) | ಕುಮಾರಪರ್ವತ ಚಾರಣ ಮಾರ್ಗದಲ್ಲಿ ಚಾರಣಿಗರಿಗೆ ಒದಗಿಸಿರುವ ಕುಡಿಯುವ ನೀರಿನ ಸೌಲಭ್ಯ ತುರ್ತು ವೈದ್ಯಕೀಯ ನೆರವು (First Aid) ವ್ಯವಸ್ಥೆ, ರಕ್ಷಣಾಪಡೆ (Rescue Team) ಶೌಚಾಲಯ ಸೌಲಭ್ಯಗಳು, ಕಸದ ಸಂಗ್ರಹಣೆ ಕೇಂದ್ರಗಳು ಹಾಗೂ ಇಲ್ಲಿ ನಿಯೋಜಿಸಿರುವ ಅರಣ್ಯ ಗಾರ್ಡ್‌ಸ್‌ಗಳ ಸಂಪೂರ್ಣ ವಿವರ ನೀಡುವುದು; ಚಾರಣಿಗರಿಗೆ ರಾತ್ರಿ ತಂಗುವ ಅಧಿಕೃತ ವ್ಯವಸ್ಥೆ ಇದ್ದರೆ ಅದರ ವಿವರಗಳನ್ನು ನೀಡುವುದು; | ಕುಡಿಯುವ ನೀರಿಗಾಗಿ ಸುಬ್ರಹ್ಮಣ್ಯ ಚೆಕ್ ಪೋಸ್ಟ್ ಹಾಗೂ ಗಿರಿಗದ್ದೆ ಚೆಕ್ ಪೋಸ್ಟ ನಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದ್ದು, ಚಾರಣ ಹಾದಿಯಲ್ಲಿ ಉಳಿದ ನಾಲ್ಕು ಕಡೆ ನೈಸರ್ಗಿಕ ಝರಿ ನೀರು ಲಭ್ಯವಿರುತ್ತದೆ.<br><br>• ಪ್ರತಿ ಚಾರಣಿಗರ ಸುರಕ್ಷತೆಗೆ ಎರಡು ಚೆಕ್ ಪೋಸ್ಟ್ ಗಳಲ್ಲಿ ಪ್ರಥಮ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿರುತ್ತದೆ.<br><br>• ಪ್ರತಿ ಚಾರಣಿಗರ ಸಹಾಯ ಕ್ಷಿಪ್ರ ನೆರವಿಗೆ ಸುಬ್ರಹ್ಮಣ್ಯ ಚೆಕ್ ಪೋಸ್ಟ್‌ನಲ್ಲಿ ಒಂದು ತಂಡ ಬೀದಳ್ಳಿ ಚೆಕ್ ಪೋಸ್ಟ್‌ನಲ್ಲಿ ಪರಿಣಿತಿ ಹೊಂದಿದ 2 ತಂಡಗಳು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.<br><br>• ಚಾರಣಿಗರ ಹಿತದೃಷ್ಟಿಯಿಂದ ಸುಬ್ರಹ್ಮಣ್ಯ ಚೆಕ್ ಪೋಸ್ಟ ಸಮೀಪ 3 ಶೌಚಾಲಯ ಗಿರಿಗದ್ದೆ ಚೆಕ್ ಪೋಸ್ಟ್ ಸಮೀಪ 8 ಶೌಚಾಲಯಗಳನ್ನು ನಿರ್ಮಿಸಲಾಗಿರುತ್ತದೆ.<br><br>• **ಗಸ್ತು ಅರಣ್ಯ ಪಾಲಕರು:**<br><br>1) ಶ್ರೀ. ಪುನೀತ್. ಎ.ಎನ್, ಗಿರಿಗದ್ದೆ ಗಸ್ತು<br>2) ಶ್ರೀ ರಾಘವೇಂದ್ರ. ಯು, ಬೀದಳ್ಳಿ ಗಸ್ತು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | ಚಾರಣಿಗರಿಗೆ ರಾತ್ರಿ ತಂಗುವ ಅಧಿಕೃತ ವ್ಯವಸ್ಥೆಯನ್ನು ಬೀದಳ್ಳಿ ಪ್ರಕೃತಿ ಶಿಬಿರದಲ್ಲಿ ಕಲ್ಪಿಸಲಾಗಿರುತ್ತದೆ. |
| ಉ) | ಕಳೆದ 3 ವರ್ಷದಲ್ಲಿ ಬೀದಳ್ಳಿ ಮತ್ತು ಕುಕ್ಕೆ ಚೆಕ್ ಪೋಸ್ಟ್‌ಗಳಲ್ಲಿ ಎಷ್ಟು ಚಾರಣ ಶುಲ್ಕ/ ದಂಡ ಸಂಗ್ರಹಿಸಲಾಗಿದೆ; (ಪ್ರತ್ಯೇಕ ವಿವರ ನೀಡುವುದು); ಈ ಶುಲ್ಕವನ್ನು ಯಾವ ಕಾರ್ಯಗಳಿಗೆ ಬಳಸಿದೆ; ವಿಭಾಗವಾರು ವೆಚ್ಚದ ವಿವರ ನೀಡುವುದು; | ಕಳೆದ 3 ವರ್ಷಗಳಲ್ಲಿ ಸಂಗ್ರಹಿಸಲಾದ ಚಾರಣ ಶುಲ್ಕದ ವಿವರ ಕೆಳಕಂಡಂತಿದೆ.<br><br>**ವರ್ಷ** – **ಶುಲ್ಕ ರೂ.**<br>2022-23 – 50,76,325.00<br>2023-24 – 53,26,575.00<br>2024-25 – 64,93,200.00<br><br>ಕಳೆದ 3 ವರ್ಷಗಳಲ್ಲಿ ಬೀದಳ್ಳಿ ಮತ್ತು ಕುಕ್ಕೆ ಚೆಕ್ ಪೋಸ್ಟ್‌ಗಳಲ್ಲಿ ಯಾವುದೇ ದಂಡ ಸಂಗ್ರಹಿಸಲಾಗಿರುವುದಿಲ್ಲ.<br><br>ಈ ಶುಲ್ಕವನ್ನು ಕೊಡಗು ಮಾನವ-ವನ್ಯಪ್ರಾಣಿ ಸಂಘರ್ಷ ಉಪಶಮನ ಪ್ರತಿಷ್ಠಾನ ನಿಧಿಗೆ ಜಮೆ ಮಾಡಲಾಗುತ್ತಿದ್ದು, ಜಮೆಯಾದ ಮೊತ್ತವನ್ನು ಮಾನವ-ವನ್ಯಪ್ರಾಣಿ ಸಂಘರ್ಷ ಕಾರ್ಯಕ್ಕಾಗಿ ಹಾಗೂ ಪರಿಸರ ಪ್ರವಾಸೋದ್ಯಮಕ್ಕಾಗಿ ಮೂಲ ಸೌಕರ್ಯ ಒದಗಿಸುವ ಕಾಮಗಾರಿ, ಪರಿಸರ ಅಭಿವೃದ್ಧಿ ಸಮಿತಿಯ ಆದಾಯ ಉತ್ಪತ್ತಿ ಚಟುವಟಿಕೆಗಳು, ತರಬೇತಿ ಕಾರ್ಯಕ್ರಮ ಹಾಗೂ ಇನ್ನಿತರ ಅವಶ್ಯ ಕಾಮಗಾರಿಗಳಿಗಾಗಿ ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸಿ, ಆಡಳಿತ ಮಂಡಳಿಯ ಸಮಿತಿ ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆದು ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ವೆಚ್ಚ ಭರಿಸಲಾಗುತ್ತಿದೆ. |
| ಊ) | ಇಲಾಖೆಯು ಜಾರಿ ಮಾಡಿರುವ ಪ್ಲಾಸ್ಟಿಕ್ ನಿಷೇಧ ಆದೇಶಗಳ ಪ್ರತಿಯನ್ನು ಒದಗಿಸುವುದು; ಪ್ಲಾಸ್ಟಿಕ್/ ಕಸದ ಉಲ್ಲಂಘನೆ ಪ್ರಕರಣಗಳಲ್ಲಿ ಎಷ್ಟು ದಂಡ ವಿಧಿಸಲಾಗಿದೆ; ಕಸದ ಸಂಗ್ರಹಣೆ, ಸಾಗಣೆ ಮತ್ತು ವಿಲೇವಾರಿ ಕುರಿತ ದಾಖಲೆಗಳನ್ನು ನೀಡುವುದು | ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಕಛೇರಿ ಸುತ್ತೋಲೆ ಸಂಖ್ಯೆ: ಪ್ರಮುಅಸಂ(ವಜೀ), ಬಿ2/ಸಿಆರ್ 34/2023-24, ದಿನಾಂಕಃ 23.08.2024 ರಲ್ಲಿ ಅರಣ್ಯದೊಳಗೆ ಏಕಬಳಕೆ ಪ್ಲಾಸ್ಟಿಕ್ ಉತ್ಪನ್ನವನ್ನು ನಿಷೇಧಿಸುವ ವ್ಯವಸ್ಥೆ ಜಾರಿಗೆ ತಂದು, ವನ ಮತ್ತು ವನ್ಯಮೃಗಗಳ ಸಂರಕ್ಷಣೆ ಮಾಡುವ ಬಗ್ಗೆ ನಿರ್ದೇಶನ ನೀಡಲಾಗಿರುತ್ತದೆ<br>(**ಅನುಬಂಧ-3ರಲ್ಲಿ ಒದಗಿಸಿದೆ).**<br><br>ಪ್ಲಾಸ್ಟಿಕ್/ ಕಸದ ಉಲ್ಲಂಘನೆ ಪ್ರಕರಣಗಳು ಇರುವುದಿಲ್ಲ.<br><br>ಚೆಕ್ ಪೋಸ್ಟ್ ಗಳಲ್ಲಿ ಸಂಗ್ರಹವಾದ ಪ್ಲಾಸ್ಟಿಕ್ /ಕಸವನ್ನು ಗ್ರಾಮ ಪಂಚಾಯಿತಿಯ ಮೂಲಕ ವಿಲೇವಾರಿಗೊಳಿಸಲಾಗಿರುತ್ತದೆ. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಋ) | ಕಳೆದ 3 ವರ್ಷದಲ್ಲಿ ಕುಮಾರ ಪರ್ವತ ಟ್ರೆಕ್‌ನಲ್ಲಿ ಎಷ್ಟು ಅವಘಡಗಳು ಸಂಭವಿಸಿವೆ; ಪ್ರತಿಯೊಂದು ಪ್ರಕರಣದ ದಿನಾಂಕ, ಸ್ಥಳ ಮತ್ತು ಕಾರಣದ ವಿವರ ನೀಡುವುದು; ಇದಕ್ಕೆ ಸಂಬಂಧಿಸಿದ ರಕ್ಷಣಾ ಕಾರ್ಯಚರಣೆಯ ವರದಿ, ಬಳಸಿದ ತಂಡದ ವಿವರ, ವೆಚ್ಚದ ಬಗ್ಗೆ ವಿವರ ನೀಡುವುದು; | ಕಳೆದ ಮೂರು ವರ್ಷಗಳಲ್ಲಿ ಯಾವುದೇ ಅವಘಡಗಳು ಸಂಭವಿಸಿರುವುದಿಲ್ಲ. |
| ಎ) | ಕುಮಾರ ಪರ್ವತ ಪ್ರದೇಶದ 'Carrying capacity' (ಒಂದು ದಿನಕ್ಕೆ ಗರಿಷ್ಟ ಚಾರಣಿಗರ ಮಿತಿ) ಯಾವ ವರದಿಯ ಆಧಾರದಲ್ಲಿ ನಿಗದಿಪಡಿಸಲಾಗಿದೆ; ಈ ಮಿತಿಗೆ ಸಂಬಂಧಿಸಿದ ವೈಜ್ಞಾನಿಕ/ ಪರಿಸರ ಅಧ್ಯಯನದ ಪ್ರತಿಗಳನ್ನು ನೀಡುವುದು; ರಾಜ್ಯದಲ್ಲಿ ನಡೆಯುವ ಪರ್ವತ ಟ್ರೆಕ್ ಸಂಬಂಧಿಸಿದ SOP (Standard Operating Procedure) ಇದ್ದರೆ ಪ್ರತಿಯನ್ನು ನೀಡುವುದು? | ಕೇಂದ್ರ ಸರ್ಕಾರದ ಮಾರ್ಗಸೂಚಿ/ ಮಾನದಂಡದಂತೆ 'Carrying capacity' (ಒಂದು ದಿನಕ್ಕೆ ಗರಿಷ್ಟ ಚಾರಣಿಗರ ಮಿತಿ) ಯನ್ನು 350 ಸಂಖ್ಯೆ ನಿಗದಿಪಡಿಸಲಾಗಿದ್ದು, ಮಾರ್ಗ ಸೂಚಿ ಪ್ರತಿಯನ್ನು **ಅನುಬಂಧ-4 ರಲ್ಲಿ** ಒದಗಿಸಿದೆ. |

**ಸಂಖ್ಯೆ: ಅಪಜೀ 350 ಎಫ್‌ಡಬ್ಲ್ಯೂಎಲ್ 2025**

**(ಈಶ್ವರ ಬಿ.ಖಂಡ್ರೆ)**
**ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು**

ಅನುಬಂಧ-1

ಕರ್ನಾಟಕ ಸರ್ಕಾರ ಅರಣ್ಯ ಇಲಾಖೆ

**ದಿನಾಂಕ : 05.06.2024 ಅಪರಾಹ್ನ 4.00 ಗಂಟೆಗೆ ಶ್ರೀ ಮನೋಜ್ ಕುಮಾರ್ ತ್ರಿಪಾಠಿ ಭಾ.ಅ.ಸೇ. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಕೊಡಗು ವೃತ್ತ, ಮಡಿಕೇರಿ ಇವರ ಅಧ್ಯಕ್ಷತೆಯಲ್ಲಿ ನಡೆದ ಕೊಡಗು ಮಾನವ ವನ್ಯಜೀವಿ ಸಂಘರ್ಷ ಉಪಶಮನ ಪ್ರತಿಷ್ಠಾನ ನಿಧಿಯ (Kodagu Man-Animal Conflict Mitigation Foundation) ಕಾರ್ಯಕಾರಿ ಸಮಿತಿ ಸಭೆಯ ನಡಾವಳಿ**

**ಹಾಜರಿದ್ದವರು :**

| | | | |
|---|---|---|---|
| 1 | ಶ್ರೀ ಮನೋಜ್‌ಕುಮಾರ್ ತ್ರಿಪಾಠಿ ಭಾ.ಅ.ಸೇ. | : | ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕೊಡಗು ವೃತ್ತ, ಮಡಿಕೇರಿ |
| 2 | ಶ್ರೀ ಬಿ. ಭಾಸ್ಕರ್ ಕ.ಅ.ಸೇ. | : | ಉಪ ಅರಣ್ಯ ಸಂರಕ್ಷಣಾಧಿಕಾರಿ ಮಡಿಕೇರಿ ಪ್ರಾದೇಶಿಕ ವಿಭಾಗ |
| 3 | ಶ್ರೀ ಎನ್.ಹೆಚ್.ಜಗನ್ನಾಥ್ ಕ.ಅ.ಸೇ. | : | ಉಪ ಅರಣ್ಯ ಸಂರಕ್ಷಣಾಧಿಕಾರಿ ವೀರಾಜಪೇಟೆ ಪ್ರಾದೇಶಿಕ ವಿಭಾಗ |
| 4 | ಶ್ರೀ ಎ.ಎ.ಗೋಪಾಲ | : | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸೋಮವಾರಪೇಟೆ ಉಪ ವಿಭಾಗ |
| 5 | ಶ್ರೀ ಕೆ.ಎ.ನೆಹರು | : | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವೀರಾಜಪೇಟೆ ಉಪ ವಿಭಾಗ |
| 6 | ಶ್ರೀ ಶ್ರೀನಿವಾಸ್‌ನಾಯ್ಕ್ | : | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವನ್ಯಜೀವಿ ಉಪ ವಿಭಾಗ |
| 7 | ಶ್ರೀ ಎಂ.ಎ.ರತನ್‌ಕುಮಾರ್ | : | ವಲಯ ಅರಣ್ಯಾಧಿಕಾರಿ, ಕುಶಾಲನಗರ ವಲಯ |
| 8 | ಶ್ರೀ ಗಂಗಾಧರ ಹೆಚ್.ಎಸ್. | : | ವಲಯ ಅರಣ್ಯಾಧಿಕಾರಿ, ತಿತಿಮತಿ ವಲಯ |
| 9 | ಶ್ರೀ ರಾಜು ಎಂ.ಎಂ. | : | ಇಕೋ ಡೆವಲಪ್‌ಮೆಂಟ್ ಕಮಿಟಿ, ಭಾಗಮಂಡಲ (ಸದಸ್ಯರು) |
| 10 | ಶ್ರೀ ಕೆ.ಎಂ.ದೇವಯ್ಯ | : | ವಲಯ ಅರಣ್ಯಾಧಿಕಾರಿ (ಹೆಚ್ಚುವರಿ) ವೀರಾಜಪೇಟೆ ವಲಯ |
| **ಗೈರು ಹಾಜರು :** | | | |
| 1 | ಶ್ರೀಮತಿ ಕೆ.ಎಸ್.ಭಾರತಿ | : | ಅಧ್ಯಕ್ಷರು, ವಿ.ಎಫ್.ಸಿ. ಬೊಳ್ಳೂರು, ಕುಶಾಲನಗರ |

*********

ಪ್ರಾರಂಭದಲ್ಲಿ ಸಮಿತಿಯ ಅಧ್ಯಕ್ಷರು ಹಾಜರಿದ್ದ ಸಮಿತಿಯ ಸದಸ್ಯರನ್ನು ಸ್ವಾಗತಿಸುತ್ತಾ ಅಜೆಂಡಾವಾರು ಚರ್ಚಿಸಿ ಈ ಕೆಳಗಿನ ನಿರ್ಧಾರವನ್ನು ತೆಗೆದುಕೊಳ್ಳಲಾಯಿತು.

1) **2023-24ನೇ ಸಾಲಿನ ಅನುಮೋದಿಸಲಾದ ಕಾಮಗಾರಿಗಳ ಪ್ರಗತಿ ಪರಿಶೀಲನೆ.**

2023-24ನೇ ಸಾಲಿನ ಕಾಮಗಾರಿಗಳನ್ನು ಐಟಂವಾರು ಪರಿಶೀಲಿಸಲಾಯಿತು. ವೀರಾಜಪೇಟೆ ವಿಭಾಗಕ್ಕೆ ಸಂಬಂಧಿಸಿದ ಕೆಲವು ಬಿಲ್ಲಿನ ಮೊತ್ತ ಪಾವತಿಗಾಗಿ ಪರಿಶೀಲನೆಯಲ್ಲಿರುತ್ತದೆಂದು ಉಪ ಅರಣ್ಯ ಸಂರಕ್ಷಣಾಧಿಕಾರಿ, ವಿರಾಜಪೇಟೆ ಇವರು ತಿಳಿಸಿದರು. ಇದಕ್ಕೆ ಸಂಬಂಧಿಸಿದಂತೆ ಕೂಡಲೇ ಬಿಲ್ಲುಗಳನ್ನು ಪರಿಶೀಲಿಸಿ ಬಿಲ್ಲಿನ ಮೊತ್ತವನ್ನು ಪಾವತಿಸುವ ಕುರಿತು ಸದಸ್ಯ ಕಾರ್ಯದರ್ಶಿ ಕೊಡಗು ಮಾನವ-ಪ್ರಾಣಿ ಸಂಘರ್ಷ ಉಪಶಮನ ಪ್ರತಿಷ್ಠಾನ ಇವರಿಗೆ ಸಲ್ಲಿಸಲು ತಿಳಿಸಿ ದಿನಾಂಕ 12.06.2024 ರೊಳಗೆ ಪೂರ್ಣಗೊಳಿಸಲು ನಿರ್ಧರಿಸಲಾಯಿತು.



* Bud 2022 Meeting

i. ಪ್ರವಾಸೋದ್ಯಮ ಚಟುವಟಿಕೆಗಳ ನಿರ್ವಹಣೆಗಾಗಿ ವಾರದಲ್ಲಿ ಒಂದು ದಿನ ದುಬಾರೆ ಆನೆ ಶಿಬಿರದ ನಿರ್ವಹಣಾ ಚಟುವಟಿಕೆಗಳನ್ನು ಕೈಗೊಳ್ಳಲು ಪ್ರವಾಸಿಗರಿಗೆ ಪ್ರತಿ ವಾರದಲ್ಲಿ ಒಂದು ದಿನ ಶಿಬಿರವನ್ನು ಮುಚ್ಚಬೇಕು ಎಂದು ಕಾರ್ಯಕಾರಿ ಸಮಿತಿಯ ಗಮನಕ್ಕೆ ತರಲಾಯಿತು.

ii. ಪ್ರತಿ ಮಂಗಳವಾರ ಪ್ರವಾಸಿಗರಿಗೆ ದುಬಾರೆ ಆನೆ ಶಿಬಿರವನ್ನು ಮುಚ್ಚಲು ನಿರ್ಧರಿಸಲಾಯಿತು. ಆದಾಗ್ಯೂ ಹಬ್ಬದ ಅಥವಾ ವಿಶೇಷ ಸಂದರ್ಭಗಳಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮಂಗಳವಾರ ಪ್ರವಾಸಿಗರಿಗೆ ಅವಕಾಶ ನೀಡುವ ಬಗ್ಗೆ ಅವರ ವಿವೇಚನೆಗೆ ಬಿಡಲಾಯಿತು.

iii. ಜೆ.ಎಲ್.ಆರ್. ಇವರು ದುಬಾರೆ ಪಕ್ಕದ ಅರಣ್ಯ ಪ್ರದೇಶದಲ್ಲಿ ಸಫಾರಿ ನಡೆಸುತ್ತಿರುವುದನ್ನು ಕಾರ್ಯಕಾರಿ ಸಮಿತಿಯ ಗಮನಕ್ಕೆ ತರಲಾಯಿತು. ಪ್ರಸ್ತುತ ಈ ವಿಷಯದ ಬಗ್ಗೆ ಏಜೆನ್ಸಿಯೊಂದಿಗೆ ಯಾವುದೇ ಕರಾರು ಒಪ್ಪಂದ ಮಾಡಿಕೊಂಡಿಲ್ಲವಾದ್ದರಿಂದ. ಪ್ರಸ್ತುತ ಸದ್ರಿಯವರೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳಲು ತಿಳಿಸಲಾಯಿತು.

iv. ಆನೆ ಶಿಬಿರದಲ್ಲಿ ಸೌನರಿ (souvenir) ಅಂಗಡಿಯನ್ನು ಗುತ್ತಿಗೆ ಆಧಾರದ ಮೇಲೆ ತೆರೆಯಲು ಚರ್ಚಿಸಿ ನಿರ್ಧರಿಸಲಾಯಿತು.

v. ಆನೆ ಶಿಬಿರದ ಎಲ್ಲಾ ಕಡೆಗಳಲ್ಲೂ ಸಿಸಿಟಿವಿಯನ್ನು ಅಳವಡಿಸಲು ಹಾಗೂ ಸದರಿ ಸಿಸಿಟಿವಿಗಳ ನಿಯಂತ್ರಣಕ್ಕೆ ಒಂದು ನಿಯಂತ್ರಣ ಕೊಠಡಿಗೆ ನಿರ್ಮಿಸುವುದು.

vi. ಆನೆ ಶಿಬಿರದ ಸಿಬ್ಬಂದಿಗೆ ಮೂಲಭೂತ ಸೌಕರ್ಯವನ್ನು ಒದಗಿಸಲು ಸೂಕ್ತ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಕಾರ್ಯಕಾರಿ ಸಮಿತಿಯ ಪರಿಗಣನೆಗೆ ಸಲ್ಲಿಸಬೇಕು. ಕಲ್ಯಾಣ ಚಟುವಟಿಕೆಗಳ್ನು ಬುಡಕಟ್ಟು ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ಆಯೋಜಿಸುವ ಬಗ್ಗೆ ತೀರ್ಮಾನಿಸಲಾಯಿತು.

vii. ಸಂದರ್ಶಕರಿಂದ ಆನೆಗಳಿಗೆ ಮತ್ತು ಆನೆಗಳಿಂದ ಸಂದರ್ಶಕರಿಗೆ ಯಾವುದೇ ರೋಗ ಹರಡುವುದನ್ನು ತಪ್ಪಿಸಲು ಮುನ್ನೆಚ್ಚರಿಕೆ ವಹಿಸುವುದು.

6) <u>ಹಾರಂಗಿ ಆನೆ ಶಿಬಿರ :</u>

i. ಹಾರಂಗಿ ಹಿನ್ನೀರಿನ ಪ್ರದೇಶದಲ್ಲಿ ಪರಿಸರ ಪ್ರವಾಸೋದ್ಯಮ ಚಟುವಟಿಕೆಗಳನ್ನು ಜೆ.ಎಲ್.ಆರ್. ವತಿಯಿಂದ ನಡೆಸುತ್ತಿದ್ದು ಕಾರ್ಯಾಚರಣೆಗೆ ಸಂಬಂಧಿಸಿದಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಡಿಕೇರಿ ಜೆ.ಎಲ್.ಆರ್.ನೊಂದಿಗೆ ಮಾಡಿಕೊಂಡ ಒಪ್ಪಂದವನ್ನು ಪರಿಶೀಲಿಸಲು ತಿಳಿಸಲಾಯಿತು.

ii. ಮೊದಲ ಹಂತದಲ್ಲಿ ಹಾರಂಗಿ ಕ್ಯಾಂಪ್‌ನಲ್ಲಿ ನಾಲ್ಕು (04) ಆನೆಗಳ ಸಫಾರಿ ಪ್ರಾರಂಭಿಸುವುದು.

iii. ಹಾರಂಗಿ ಆನೆ ಶಿಬಿರಕ್ಕೆ ಜನ ಸಂದಣಿ ಕಡಿಮೆ ಇರುವುದರಿಂದ ಈಗಿರುವ ಪ್ರವೇಶ ಶುಲ್ಕವನ್ನು ಮುಂದುವರೆಸಲು ನಿರ್ಧರಿಸಲಾಯಿತು.

7) <u>ಕುಮಾರಧಾರ ಪರ್ವತ ಟ್ರೆಕ್ಕಿಂಗ್ ಮಾರ್ಗ :</u>

i. ಟ್ರೆಕ್ಕಿಂಗ್ ಮಾರ್ಗದಲ್ಲಿ ಜನಸಂದಣಿಯನ್ನು ತಪ್ಪಿಸಲು ಸಲುವಾಗ ಪ್ರದೇಶದ ಸಾಮರ್ಥ್ಯವನ್ನು ನಿರ್ಧಾರಿಸಿಕೊಂಡು ಹಂತ ಹಂತವಾಗಿ ಪ್ರವಾಸಿಗರಿಗೆ ಅವಕಾಶ ಕಲ್ಪಿಸಿಕೊಡುವುದು.

ii. ಗಿರಿಗದ್ದೆಯಲ್ಲಿ ರಾತ್ರಿ ತಂಗುವ ಸೌಲಭ್ಯವನ್ನು ಒದಗಿಸಲಾಗಿರುತ್ತದೆ. ಆದರೆ ವನ್ಯಧಾಮದ ಮಿತಿಯಲ್ಲಿ ರಾತ್ರಿ ತಂಗಲು ಅನುಮತಿ ನೀಡಬಾರದೆಂದು ಕಾರ್ಯಕಾರಿ ಸಮಿತಿ ಸದಸ್ಯರು ತಿಳಿಸಿದರು.

iii. ಸಂದರ್ಶಕರು ನೋಂದಾಯಿತ ಮಾರ್ಗದರ್ಶಕರೊಂದಿಗೆ ಮಾತ್ರ ಗುಂಪಿನಲ್ಲಿ ಚಾರಣಕ್ಕೆ ಹೋಗಲು ಅನುಮತಿಸಲಾಗುವುದು ಎಂದು ನಿರ್ಧರಿಸಲಾಯಿತು. ಎಲ್ಲಾ ಚಾರಣಿಗರು ಕಡ್ಡಾಯವಾಗಿ ಸೂರ್ಯಾಸ್ತದ ಮೊದಲು ಹಿಂತಿರುಗಬೇಕು. ನಿಗದಿತ ಸಮಯಕ್ಕಿಂತ ಹೆಚ್ಚು ವನ್ಯಧಾಮದಲ್ಲಿ ಇರುವುದು ಕಂಡು ಬಂದಲ್ಲಿ ದಂಡ ವಿಧಿಸಲು ತೀರ್ಮಾನಿಸಲಾಯಿತು.

8) <u>ಮಾಂದಲಪಟ್ಟಿ ವ್ಯೂ ಪಾಯಿಂಟ್ :</u>

i. ಮಾಂದಲಪಟ್ಟಿಯಲ್ಲಿರುವ ವ್ಯೂ ಪಾಯಿಂಟ್‌ನ ಪ್ರದೇಶದ ಸಾಮಾರ್ಥ್ಯವನ್ನು ನಿರ್ಧರಿಸಿಕೊಂಡು ಪ್ರವಾಸಿಗರನ್ನು ಬಿಡುವುದು.

9) <u>ನಿಶಾನಿ ಮೊಟ್ಟೆ ಚಾರಣ ಮಾರ್ಗ :</u>

i. ಈ ಮೊದಲೇ ಚರ್ಚಿಸಿದಂತೆ ವನ್ಯಧಾಮದ ಮಿತಿಯಲ್ಲಿ ರಾತ್ರಿ ತಂಗುವಿಕೆಯನ್ನು ನಿರ್ಬಂಧಿಸುವುದು.

ii. ವನ್ಯಧಾಮದ ಪ್ರದೇಶಗಳಲ್ಲಿ ವಿಧಿಸಲಾಗುತ್ತಿರುವ ಪ್ರವೇಶ ಶುಲ್ಕ, ಟ್ರೆಕ್ಕಿಂಗ್ ಶುಲ್ಕ, ಇತರ ಶುಲ್ಕಗಳನ್ನು (ಯಾವುದಾದರೂ ಇದ್ದರೆ) ಪರಿಶೀಲಿಸಿ ಪರಿಷ್ಕರಿಸಬೇಕಾದಲ್ಲಿ ಪ್ರಸ್ತಾವನೆಯನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ವನ್ಯಜೀವಿ) ಮುಖ್ಯ ವನ್ಯಜೀವಿ ಪರಿಪಾಲಕರು, ಬೆಂಗಳೂರು ಇವರಿಗೆ ಸಲ್ಲಿಸುವ ಬಗ್ಗೆ ನಿರ್ಧರಿಸಲಾಯಿತು.

iii. ಮಾನವ ವನ್ಯಜೀವಿ ಸಂಘರ್ಷ ಉಪ ಘಟಕಗಳಿಗೆ ಮತ್ತು ಇತರೆ ಹೊರಗುತ್ತಿಗೆ ಸಿಬ್ಬಂದಿಗೆ ಅಗತ್ಯವಿರುವ ಐಟಂಗಳು ಸಿದ್ಧಪಡಿಸಬೇಕಾದ ಪಟ್ಟಿಯು ಏಕರೂಪತೆಯನ್ನು (ಒಂದೇ ತರಹ) ಹೊಂದಿರಲು ತೀರ್ಮಾನಿಸಲಾಯಿತು. ಹಾಗೆಯೆ ಖರೀದಿಸಬೇಕಾದ ಐಟಂಗಳನ್ನು ವಿಭಾಗಮಟ್ಟದ ಕಚೇರಿಯಿಂದ ಖರೀದಿಸಲು ನಿರ್ಧಾರಿಸಲಾಯಿತು.

iv. ಮಾನವ ಪ್ರಾಣಿ ಸಂಘರ್ಷವನ್ನು ನಿಯಂತ್ರಿಸಲು ವಿಭಾಗ ಕಛೇರಿಗೆ ವಾಹನಗಳ ಅವಶ್ಯಕತೆ ಇರುವುದರಿಂದ 2024-25ರ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಖರೀದಿಸಲು ಅವಕಾಶ ಕಲ್ಪಿಸಿಕೊಳ್ಳಲು ತೀರ್ಮಾನಿಸಲಾಯಿತು.

v. ಆನೆಗಳ ಚಲನವಲನಗಳ ಮೇಲೆ ನಿಗಾ ಇಡಲು ಪ್ರತಿ ವ್ಯಾಪ್ತಿಯ ಘಟಕವು ಡ್ರೋನ್ ಕ್ಯಾಮರವನ್ನು ಹೊಂದಬೇಕಾಗಿದ್ದು, 2024-25ರ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಳ್ಳಲು ತೀರ್ಮಾನಿಸಲಾಯಿತು.

vi. ಕ್ಯಾಮರಾ ಟ್ರ್ಯಾಪ್‌ಗಳು, ಸಿಸಿಟಿವಿಗಳ ಕಾರ್ಯ ಕ್ಷಮತೆಯನ್ನು ಪರಿಶೀಲಿಸಿಕೊಳ್ಳಬಹುದಾಗಿದ್ದು ಹೆಚ್ಚುವರಿ ಉಪಕರಣಗಳ ಅಗತ್ಯವಿದ್ದರೆ ಪ್ರಸ್ತಾವನೆ ಸಲ್ಲಿಸಲು ತಿಳಿಸಲಾಯಿತು.

ಅಂತಿಮವಾಗಿ ಹಾಜರಿದ್ದ ಎಲ್ಲರನ್ನು ಅಭಿನಂದಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಅಧ್ಯಕ್ಷರು ಮತ್ತು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
ಕೊಡಗು ವೃತ್ತ, ಮಡಿಕೇರಿ

<u>ಸಂಖ್ಯೆ : ನಗದು/ಬಿಯುಡಿ/ಸಿಆರ್-23/ಫೌಂಡೇಷನ್/2023-24</u> <u>ದಿನಾಂಕ 05.06.2024</u>

ಪ್ರತಿಯನ್ನು :

1. ಸದಸ್ಯ ಕಾರ್ಯದರ್ಶಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ ಮಡಿಕೇರಿ ಪ್ರಾದೇಶಿಕ ವಿಭಾಗ ಇವರಿಗೆ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
2. ಉಪ ಅರಣ್ಯ ಸಂರಕ್ಷಣಾಧಿಕಾರಿ ವೀರಾಜಪೇಟೆ ಪ್ರಾದೇಶಿಕ ವಿಭಾಗ ಮತ್ತು ವನ್ಯಜೀವಿ ವಿಭಾಗ ಇವರಿಗೆ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
3. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸೋಮವಾರಪೇಟೆ ಮತ್ತು ವೀರಾಜಪೇಟೆ ಉಪ ವಿಭಾಗ ಇವರಿಗೆ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
4. ವಲಯ ಅರಣ್ಯಾಧಿಕಾರಿ, ಕುಶಾಲನಗರ, ತಿತಿಮತಿ ಮತ್ತು ವೀರಾಜಪೇಟೆ ಇವರಿಗೆ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
5. ಶ್ರೀ ರಾಜು ಎಂ.ಎಂ., ಚೇರಂಗಾಲ, ಸದಸ್ಯರು, ಇಕೋ ಡೆವೆಲಪ್‌ಮೆಂಟ್ ಕಮಿಟಿ, ಭಾಗಮಂಡಲ ವಲಯ ಇವರಿಗೆ
6. ಶ್ರೀಮತಿ ಕೆ.ಎಸ್.ಭಾರತಿ, ಅಧ್ಯಕ್ಷರು, ವಿ.ಎಫ್.ಸಿ. ಬೊಳ್ಳೂರು, ಕುಶಾಲನಗರ ಇವರಿಗೆ
7. ಕಛೇರಿ ಪ್ರತಿ.

ಸಂಖ್ಯೆ:ಎ2.ಬಿಜಿಟಿ.[illegible]-01 /2024-25 ದಿನಾಂಕ: 05 JUL 2024

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಮಡಿಕೇರಿ ವನ್ಯಜೀವಿ ವಿಭಾಗ ಮತ್ತು ವಲಯ ಅರಣ್ಯಾಧಿಕಾರಿ, ವನ್ಯಜೀವಿ ವಲಯ, ಪುಷ್ಪಗಿರಿ/ ತಲಕಾವೇರಿ/ ಮಾಕುಟ್ಟ/ ಶ್ರೀಮಂಗಲ ಇವರಿಗೆ ಉಲ್ಲೇಖದ ಪತ್ರವನ್ನು ಮಾಹಿತಿ ಹಾಗೂ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಮಡಿಕೇರಿ ವನ್ಯಜೀವಿ ವಿಭಾಗ.

ಅನುಬಂಧ-2

ಕರ್ನಾಟಕ ಸರ್ಕಾರ ಅರಣ್ಯ ಇಲಾಖೆ

ದೂರವಾಣಿ:08276-281107
ಇ-ಮೇಲ್:rfowlpushpagiri@gmail.com

**ವಲಯ ಅರಣ್ಯಾಧಿಕಾರಿಗಳ ಕಛೇರಿ, ಪುಷ್ಪಗಿರಿ ವನ್ಯಜೀವಿ ವಲಯ, ಸೋಮವಾರಪೇಟೆ ತಾ|| - 571236**

ಸಿಬ್ಬಂದಿ/ಚಾರಣ:ವಿವ/ 14 /2024-25(335) ದಿನಾಂಕ:19.11.2024

ಗೆ,

ಉಪ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ,
**ವನ್ಯಜೀವಿ ವಿಭಾಗ, ಮಡಿಕೇರಿ.**

ಮುಖಾಂತರ,

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ,
ವನ್ಯಜೀವಿ ವಿಭಾಗ, ಮಡಿಕೇರಿ.

ಮಾನ್ಯರೇ,

ವಿಷಯ :- ಕುಮಾರ ಪರ್ವತದ ಚಾರಣ ಮಾರ್ಗಗಳಲ್ಲಿ ಉಂಟಾಗುತ್ತಿರುವ ತೊಂದರೆಗಳ ಬಗ್ಗೆ.

ಉಲ್ಲೇಖ :- ಉಪ ವಲಯ ಅರಣ್ಯಾಧಿಕಾರಿ, ಸೋಮವಾರಪೇಟೆ ಕಡಮ್ಮಕಲ್ಲು ಶಾಖೆ ಇವರ ವರದಿ ಸಂಖ್ಯೆ: 333/2024-25 ದಿನಾಂಕ: 16.10.2024.

***************

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಪುಷ್ಪಗಿರಿ ವನ್ಯಜೀವಿ ವಲಯದ 2024-25 ನೇ ಸಾಲಿನಲ್ಲಿ ಆನ್ಲೈನ್ ಮುಖಾಂತರ ಟಿಕೆಟ್ ಕಾಯ್ದಿರಿಸಿ, ದಿನಾಂಕ: 05.10.2024 ರಿಂದ ಚಾರಣಿಗರು ಚಾರಣ ಮಾಡಲು ಈ ಕೆಳಗಿನ ಮೂರು ಮಾರ್ಗವನ್ನಾಗಿ ವಿಂಗಡಿಸಲಾಗಿರುತ್ತದೆ.

1. ಬೀದಳ್ಳಿ – ಕುಮಾರಪರ್ವತ – ಬೀದಳ್ಳಿ
2. ಬೀದಳ್ಳಿ – ಕುಮಾರಪರ್ವತ – ಸುಬ್ರಮಣ್ಯ
3. ಸುಬ್ರಮಣ್ಯ – ಕುಮಾರಪರ್ವತ – ಸುಬ್ರಮಣ್ಯ

ಮುಂದುವರೆದು, ಮೇಲಿನ ಉಲ್ಲೇಖದ ಉಪ ವಲಯ ಅರಣ್ಯಾಧಿಕಾರಿ, ಸೋಮವಾರಪೇಟೆ ಕಡಮ್ಮಕಲ್ಲು ಶಾಖೆ ಇವರು, ಚಾರಣ ಮಾರ್ಗಗಳಲ್ಲಿ ಉಂಟಾಗುತ್ತಿರುವ ಕೆಲವು ತೊಂದರೆಗಳ ಬಗ್ಗೆ ಈ ಕಛೇರಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ ಈ ಕೆಳಗಿನಂತೆ ಅಂಶಗಳು ಇರುತ್ತದೆ.

- ಸುಬ್ರಮಣ್ಯ – ಕುಮಾರಪರ್ವತ – ಸುಬ್ರಮಣ್ಯ ಚಾರಣ ಮಾರ್ಗವು ಒಟ್ಟು 24 ಕಿ.ಮೀ ದೂರವಿದ್ದು, ಕಳೆದ ವರ್ಷ ಚಾರಣಿಗರು ಚಾರಣ ಮಾಡುವ ಸಂದರ್ಭ, ಸುಬ್ರಮಣ್ಯದ ದೇವರಗದ್ದೆ ಪ್ರವೇಶದ್ವಾರದಿಂದ ಪ್ರಾರಂಬಿಸಿ 05 ಕಿ.ಮೀ ಚಾರಣ ಮಾಡಿ, ಪುಷ್ಪಗಿರಿ ವನ್ಯಜೀವಿ ವಲಯದ ಗಿರಿಗದ್ದೆ ಕಳ್ಳಬೇಟೆ ತಡೆ ಶಿಬಿರದ ಆವರಣದಲ್ಲಿ ರಾತ್ರಿ ತಂಗಿ ಮರುದಿನ ಕುಮಾರಪರ್ವತದವರೆಗೆ ತಲುಪಿ ಅದೇ ದಿನ ಚಾರಣವನ್ನು ಮುಕ್ತಾಯಗೊಳಿಸುತ್ತಿದ್ದರು.

Trekkers: /2024-25

- ಆದರೆ, ಪ್ರಸ್ತುತ 2024-25 ನೇ ಸಾಲಿನಿಂದ ಚಾರಣಿಗರಿಗೆ ವನ್ಯಧಾಮದಲ್ಲಿ ತಂಗ ನಿರ್ಬಂಧಿಸಲಾಗಿರುವುದರಿಂದ, ಸುಬ್ರಮಣ್ಯ – ಕುಮಾರಪರ್ವತ – ಸುಬ್ರಮಣ್ಯದವರಗೆ ಒಟ್ಟು ಕಿ. ಮೀ , ಬೀದಳ್ಳಿ – ಕುಮಾರಪರ್ವತ – ಸುಬ್ರಮಣ್ಯದವರಗೆ ಒಟ್ಟು 19 ಕಿ ಮೀ ಚಾರಣವನ್ನು ಬೆಳ 7.00 ಗಂಟೆಗೆ ಪ್ರಾರಂಭಿಸಿ ಅದೇ ದಿನ ಸಂಜೆ 6. 00 ಗಂಟೆಗೆ ಮುಕ್ತಾಯಗೊಳಿಸಲು ಪ್ರಾಯೋಗಿಕವ ಚಾರಣಿಗರಿಗೆ ಸಾಧ್ಯವಾಗುತ್ತಿಲ್ಲ.
- ಶೇಕಡ 90 ರಷ್ಟು ಚಾರಣಿಗರು ಸಂಜೆ 6.00 ಗಂಟೆಗೆ ಹಿಂದುರುಗಲು ಸಾಧ್ಯವಾಗದಿರುವುದರಿಂ ಕತ್ತಲಲ್ಲಿ ದಾರಿ ತಪ್ಪಿ ಕಾಡಿನ ಮಧ್ಯದಲ್ಲೇ ಉಳಿದಿರುತ್ತಾರೆ ಹಾಗೂ ಅವರನ್ನು ಹುಡುಕಿ ಬೇಸ್ ಕ್ಯಾಂಪ್‌ಗೆ ಕರ ತರಲು ರಾತ್ರಿ 10.00 ರಿಂದ 12.00 ಗಂಟೆ ಸಮಯವಾಗುತ್ತಿರುತ್ತದೆ.
- ಹಾಗೂ ಕಲವು ಚಾರಣಿಗರು ಕುಮಾರಪರ್ವತದಿಂದ ಹಿಂದಿರುಗುವಾಗ ಕತ್ತಲಿನಲ್ಲಿ ಜಾರಿ ಬಿದ ಕೈಕಾಲುಗಳಿಗೆ ಪೆಟ್ಟು ಮಾಡಿಕೊಂಡು ಅಲ್ಲೇ ಉಳಿಯುವಂತಹ ಸ್ಥಿತಿಯಲ್ಲಿರುತ್ತಾರೆ. ಅವರನ್ನು ಅಲ್ಲಿಂ ಸಿಬ್ಬಂದಿಗಳು ಹೊತ್ತು ಕರ ತರುವುದು ಪ್ರತಿ ದಿನವೂ ನಡೆಯುತ್ತಿರುತ್ತದೆ.
- ಇರುವ ಅಲ್ಪ ಸಿಬ್ಬಂದಿಗಳಿಂದ, ಕತ್ತಲಿನಲ್ಲಿ ದಾರಿ ತಪ್ಪಿದ ಚಾರಣಿಗರನ್ನು ಹುಡುಕಿಕೊಂಡು ಬರುವುದ ಹಾಗೂ ಮರುದಿನ ಬರುವ ಹೊಸ ಚಾರಣಿಗರನ್ನು ತಪಾಸಣೆ ಮಾಡುವುದು ಸಿಬ್ಬಂದಿಗಳಿ ಕಷ್ಟವಾಗುತ್ತಿರುತ್ತದೆ.
- ಇದರಿಂದ ಕತ್ತಲಲ್ಲಿ ದಾರಿ ತಪ್ಪಿದ ಚಾರಣಿಗರಿಗೆ ವನ್ಯಜೀವಿಗಳಿಂದ ಅಪಾಯ ಉಂಟಾಗುವ ಸಾಧ್ಯ ಹೆಚ್ಚಾಗಿರುತ್ತದೆ ಎಂಬುವುದಾಗಿ ಉಪ ವಲಯ ಅರಣ್ಯಾಧಿಕಾರಿ, ಸೋಮವಾರಪೇಟೆ ಕಡಮ್ಮಕಲ್ಲು ಶಾ ಇವರು ಈ ಕಛೇರಿಗೆ ಮೇಲಿನ ಉಲ್ಲೇಖದಲ್ಲಿ ವರದಿ ಮಾಡಿಕೊಂಡಿರುತ್ತಾರೆ.

ಮುಂದುವರೆದು, ಸುಬ್ರಮಣ್ಯ – ಕುಮಾರಪರ್ವತ – ಸುಬ್ರಮಣ್ಯ ಮಾರ್ಗ ಹಾಗೂ ಇತರೆ ಮಾರ್ಗಗಳ ಚಾರಣ ಧಾರಣಾ ಸಾಮರ್ಥ್ಯವನ್ನು (Carrying capacity) ವೈಜ್ಞಾನಿಕವಾಗಿ 350 ಸಂಖ್ಯೆ ಚಾರಣಿಗರೆಂದ ನಿಗಧಿಪಡಿಸಲಾಗಿರುತ್ತದೆ. ವನ್ಯಜೀವಿಗಳಿಗೆ ಯಾವುದೇ ರೀತಿಯ ಅಡಚಣೆಯಾಗದಂತೆ ಹಾಗ ಪ್ರಾಣಿಗಳು ಮುಕ್ತವಾಗಿ ಚಲನವಲನ ನಡೆಸಲು ಸಮಯ ಮಿತಿಯನ್ನು ಪರಿಗಣಿಸಲಾಗಿರುತ್ತದೆ ಮತ್ತ ಮುಂಚೂಣಿ ಸಿಬ್ಬಂದಿಗಳು ವರದಿ ಮಾಡಿರುವಂತೆ, ಚಾರಣಿಗರು ಸಂಜೆ 6 ಗಂಟೆಯ ನಂತರವೂ ವನ್ಯಧಾಮದಲ್ಲಿ ಓಡಾಡುವುದರಿಂದ ಅವರನ್ನು ಕರೆತರಲು ಸಿಬ್ಬಂದಿಗಳ ನಿರಂತರ ಓಡಾಟದಿಂ ವನ್ಯಜೀವಿಗಳ ಮುಕ್ತ ಸಂಚಾರಕ್ಕೆ ಅಡಚಣೆಯಾಗುತ್ತಿರುತ್ತದೆ. ಹೊಸ ಮಾರ್ಗ ಸೂಚಿಯ ಪ್ರಕಾ ಸಮಯದ ಮಿತಿಯಿಂದ 24 ಕಿ. ಮೀ. ದೂರವನ್ನು ಏಕ ಕಾಲದಲ್ಲಿ ಚಾರಣ ಮಾಡಲು ಹಲವಾರ ಪ್ರವಾಸಿಗರು ಬೇಸರ ವ್ಯಕ್ತ ಪಡಿಸಿರುತ್ತಾರೆ. ಇದರ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ತಮ ಅನಿಸಿಕೆ/ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೆ. ಸದರಿ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ.

ಅಲ್ಲದೇ, ಆನ್ಲೈನ್ ಬುಕ್ಕಿಂಗ್ ಮಾಡುವ 24 ಗಂಟೆಗೂ ಮುನ್ನ ಟಿಕೇಟ್‌ಗಳು ಬ್ಲಾಕ್ ಆಗುವುದರಿಂ ಚಾರಣಾ ಧಾರಣಾ ಸಾಮರ್ಥ್ಯ (Carrying capacity) 350 ಸಂಖ್ಯೆ ಚಾರಣಿಗರು ಇದ್ದರೂ ಕೂಡ, ರಜ ದಿನಗಳಲ್ಲಿ 150 ರಿಂದ 200 ಜನರು ಮಾತ್ರ ಚಾರಣ ಮಾಡುತ್ತಿದ್ದು, ಹಲವಾರು ಪ್ರವಾಸಿಗರು ಚಾರಣಿಗರು ಪ್ರವೇಶದ್ವಾರದ ಬಳಿ ಬಂದು ಆನ್ಲೈನ್ ಬುಕ್ಕಿಂಗ್ ಆಯ್ಕೆ ಇಲ್ಲದೆ ಹಿಂದಿರುಗುತ್ತಿರುತ್ತಾರೆ.

ಇದರಿಂದಾಗಿ Eco-tourisum ಆದಾಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿರುತ್ತದೆ. ಚಾರಣ ವ್ಯವಸ್ಥೆಯಲ್ಲಿರುವ ಅಂಶಗಳು ಸಂಕ್ಷಿಪ್ತವಾಗಿ ಹೇಳುವುದಾದರೆ,

- ಚಾರಣಿಗರು ಚಾರಣ ಮಾಡಲು ಹೆಚ್ಚು ಸಮಯ ತಗೆದುಕೊಳ್ಳುವುದರಿಂದ, ವನ್ಯಜೀವಿಗಳ ಮುಕ್ತ ಸಂಚಾರಕ್ಕೆ ಹಾಗೂ ನೆಮ್ಮದಿಯ ಜೀವನಕ್ಕೆ ತೊಂದರೆಯಾಗುತ್ತಿರುತ್ತದೆ.
- ಚಾರಣಿಗರು ಆನ್ಲೈನ್ ಬುಕಿಂಗ್‌ನಿಂದ ಹಾಗೂ ಚಾರಣ ಮಾಡುವ ವ್ಯವಸ್ಥೆಯಿಂದ ಬೇಸರ ಹಾಗೂ ಅಸಮಧಾನ ವ್ಯಕ್ತ ಪಡಿಸುತ್ತಿರುತ್ತಾರೆ. ಚಾರಣಿಗರ ಸುರಕ್ಷತೆ ಮತ್ತು ಭದ್ರತೆಗೆ ಕೂಡ ಹಾನಿಯಾಗುವ ಸಂಭವವಿರುತ್ತದೆ.
- ಸಿಬ್ಬಂದಿಗಳ ಸಾಮರ್ಥ್ಯ/ ಸಮಯ ವ್ಯರ್ಥವಾಗುತ್ತಿರುತ್ತದೆ. ಅಲ್ಲದೇ, ಹೆಚ್ಚುವರಿ ಸಿಬ್ಬಂದಿಗಳ ಅವಶ್ಯಕತೆ ಉಂಟಾಗುತ್ತದೆ.
- Eco- tourisum ಆದಾಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿರುತ್ತದೆ.

ಸದರಿ ವ್ಯವಸ್ಥೆಯ ಕುರಿತು ಇರುವ ಪ್ರತಿಕ್ರಿಯೆಗಳು/ಅಭಿಪ್ರಾಯಗಳು ತಮ್ಮ ಅವಗಾಹನೆಗೆ ಹಾಗೂ ಮುಂದಿನ ಕ್ರಮಕ್ಕಾಗಿ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.

ಅಡಕ: 1. ಉಪ ವಲಯ ಅರಣ್ಯಾಧಿಕಾರಿಯವರ ವರದಿಯ ಪ್ರತಿ


2. ಸಾಮಾಜಿಕ ಜಾಲತಾಣಗಳಲ್ಲಿ ಚಾರಣಿಗರ ಅನಿಸಿಕೆ/ಅಭಿಪ್ರಾಯದ ಪ್ರತಿ

"ವಂದನೆಗಳೊಂದಿಗೆ"

ತಮ್ಮ ನಂಬುಗೆಯ,

ವಲಯ ಅರಣ್ಯಾಧಿಕಾರಿ,
ಪುಷ್ಪಗಿರಿ ವನ್ಯಜೀವಿ ವಲಯ
ಸೋಮವಾರಪೇಟೆ

Trekkers: /2024-25


Comments
moto_lensman 6w
But Iga ivru madiro rules itkondu KP trek madodu baari kasta beligge 6pm ge hogi sanje 6pm olage barbekante
3
Reply See translation
the_unlucky_fella 6w
Can we stay on girigadde on nights
1
Reply
View 1 more reply
Add a comment for kumara_parvatha

**Comments**

**lokesharasappa** 4w

Who told that the trek should be completed in a single day sir if anyone treks from subramanya side it's definitely not possible to complete the trek within a day can stay campaigning near check post and go for a early morning sunrise trek to the peak , if trekking from swomarpete side means can finish by single day just like trekking shivagange betta near to Bangalore

Reply

View 4 previous replies

**sahyadri_sanchara** 4w

@the_unlucky_fella last week only i had completed that trek

Reply

View 11 more replies

**charlie____xcvi** 4w

Night stay ittalla en aythu

Reply 16

View 4 more replies

**nandini.n8** 4w

Why can't we start from Kukke side and get down at Somwarpete ?
Please clarify

Reply 36

View 5 more replies

Add a comment for anush_asha27...

ಅವರು ಸುಬ್ರಹ್ಮಣ್ಯ ತಲುಪುವಾಗ ಬಯ್ಯ ಆಗುತ್ತದೆ. ಅಂತದ್ರಲ್ಲಿ ಟೈಟ್ ಜೀನ್ಸ್ ಹಾಕಿಕೊಂಡು ಬೆನ್ನಿಗೆ ಬ್ಯಾಗ್ ಹಾಕಿಕೊಂಡು ಒಂದು ಕೈಯಲ್ಲಿ ನೀರಿನ ಬಾಟಲಿ ಇನ್ನೊಂದು ಕೈಯಲ್ಲಿ ಸ್ಟಿಕ್ ಹಿಡಿದು ಕಾಡಿನ ಗಂಧ-ಗಾಳಿ ಗೊತ್ತಿಲ್ಲದ ಪ್ಯಾಟೆ ಮಂದಿ. ಬೆಳಿಗ್ಗ ಹೊರಟು ಕುಮಾರ ಪರ್ವತ ಆಸ್ವಾದಿಸಿ. 6 ಗಂಟೆಯ ಒಳಗೆ ಹಿಂತಿರುಗುವುದು ಸಾಧ್ಯವೇ..!?

ಈ ಹಿಂದೆ ಇದ್ದ ನಿಯಮಗಳನ್ನು ಬದಲಾಯಿಸುವಾಗ. ಸ್ಥಳಿಯರನ್ನು ಹಾಗು ಈ ಹಿಂದೆ ಚಾರಣ ಮಾಡಿದ ನಾಲ್ಕೈದು ಜನರನ್ನು ಕೇಳಿದರೂ ಸಾಕಿತ್ತು ಅದರಲ್ಲಿ 90% ಜನ. ಒಂದೇ ದಿನದಲ್ಲಿ ಹೋಗಿ ಬರುವುದು ಕಷ್ಟ ಎಂಬ ಅಭಿಪ್ರಾಯ ಪಡುತ್ತಿದ್ದರು. ಕನಿಷ್ಠ ಪಕ್ಷ ಅಲ್ಲಿ ಕಾವಲು ಇರುವ ವಾಚರಿಯನ್ನು ಕೇಳಿದ್ರು ಸಾಕಾಗುತ್ತಿತ್ತು.


ಪ್ರಾಧಿಕಾರದ ವಿಷಯದಲ್ಲಿ ತುರ್ತು ಗ್ರಾಮ ಸಭೆ ಕೈಗೊಂಡು. ಸಹಿ ಸಂಗ್ರಹಿಸಿ ಬೆಂಗಳೂರಿಗೆ ನಿಯೋಗ ಕೊಂಡು ಹೋಗಿ. ಮತ್ತೆ ವ್ಯವಸ್ಥಾಪನಾ ಸಮಿತಿ ಆಗುವಂತೆ ನೋಡಿಕೊಂಡ ಊರಿನ ಘಟಾನುಘಟಿ ರಾಜಕೀಯ ನಾಯಕರು. ಒಂದು ಸಣ್ಣ ನಿಯೋಗ ಕಟ್ಟಿಕೊಂಡು ಅರಣ್ಯ ಸಚಿವರಿಗೆ ನಿಜಾಂಶ ತಿಳಿಸಿ. ಈ ಹಿಂದೆ ಇದ್ದಂತಹ ನಿಯಮಗಳನ್ನು ಮುಂದುವರಿಸಿಕೊಂಡು ಹೋಗುವಂತೆ ಮನವಿ ಮಾಡಬೇಕಾಗಿ ಚಾರಣ ಪ್ರಿಯರ ವಿನಂತಿ.

..........................................

Pattler News

pattlernews.com/2024/10/kumaraparvatha.html

# ಕುಮಾರ ಪರ್ವತಕ್ಕೆ ಇನ್ನು ಮುಂದೆ ಚಾರಣ ಅಲ್ಲ, ವೇಗದ ನಡಿಗೆ



ಅಲ್ಲ ಸ್ವಾಮಿ ಈ ಮಂತ್ರಿಗಳಿಗೆ ಕೇಳುವವರು ಹೇಳುವವರು ಯಾರೂ ಇಲ್ಲವೇ...!? ಅಲ್ಲಿ ಬೆಂಗಳೂರಿನ ಹವಾ ನಿಯಂತ್ರಿತ ಕೊಠಡಿಯಲ್ಲಿ ಕೂತು ನಿಯಮ ರೂಪಿಸುವಾಗ ಅದರ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳುವ ಪುರುಸೊತ್ತು ಇಲ್ಲವೇ..!?

ಇನ್ನು ಮುಂದೆ ಕುಮಾರ ಪರ್ವತಕ್ಕೆ ಹೋಗುವವರು ಬೆಳಿಗ್ಗೆ 6 ಗಂಟೆಗೆ ಹೋಗಿ ಸಂಜೆ 6 ಗಂಟೆಯ ಒಳಗೆ ಹಿಂತಿರುಗಿ ಸುಬ್ರಹ್ಮಣ್ಯ ತಲುಪಬೇಕು. ಎಂಬ ಕಾನೂನು ಅರಣ್ಯ ಸಚಿವರು ತಂದಿದ್ದಾರೆ. ಅವರಿಗೆ ಕುಮಾರ ಪರ್ವತ ಯಾವ ದಿಕ್ಕಿನಲ್ಲಿ ಇದೆ.,? ಎಷ್ಟು ದೂರ ಇದೆ..? ಹೋಗುವ ದಾರಿ ಎಷ್ಟು ಕಷ್ಟಕರವಾಗಿದೆ ಎಂಬ ಸಣ್ಣ ಅರಿವು ಕೂಡ ಇಲ್ಲ ಎಂಬುದು ಅವರು ಜಾರಿಗೆ ತಂದ ನಿಯಮಗಳಿಂದ ಸ್ಪಷ್ಟವಾಗುತ್ತದೆ.

ಮಂಡೆ ಸಮ ಉಂಟಾ...? ಚಾರಣಕ್ಕೆ ಹೋಗುವುದು ಪ್ರಕೃತಿ ಸೌಂದರ್ಯ ವೀಕ್ಷಣೆಗಾಗಿ. ಮಧ್ಯಾಹ್ನ ಸುಡು ಬಿಸಿಲಿನಲ್ಲಿ ಪರ್ವತಕ್ಕೆ ಹೋಗಿ ಎಂತ ಸೌಂದರ್ಯ ವೀಕ್ಷಣೆ ಮಾಡುವುದು..? ನಂಗೊಂದು ಡೌಟು. ಫಲಾಪೇಕ್ಷೆ ಇಲ್ಲದೆ ಅಸಂಖ್ಯಾತ ಚಾರಣಿಗರ ಹಸಿವು-ಬಾಯಾರಿಕೆ ನೀಗಿಸಿದ ಗಿರಿಗದ್ದೆ ಭಟ್ರಿಗೆ ಚಿಲ್ಲರೆ ದುಡ್ಡು ಆಗುತ್ತದೆ ಎಂದು ಭಟ್ರಿಗೆ ಆಗದವರು ಯಾರಾದ್ರೂ ಸಚಿವರ ಕಿವಿ ಊದಿದರ..!?
ದಿನಂಪ್ರತಿ ಕಾಡಿಗೆ ಕನಕ್ಕ್ ಗೆ ಹೋಗುವ ಮೋನಪ್ಪಣ್ಣ ನನ್ನು ಬೆಳಿಗ್ಗೆ ಕಳ್ಳು [illegible] ಕುಮಾರ ಪರ್ವತಕ್ಕೆ ಹೋಗಿ ಅಲ್ಲಿ ಒಂದು ಬೀಡಿ ಸೇದಿ. ಎಲೆ ಅಡಿಕೆ ತಿಂ[illegible]

ಇದರಿಂದಾಗಿ Eco-tourisum ಆದಾಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿರುತ್ತದೆ. ಚಾರಣ ವ್ಯವಸ್ಥೆಯಲ್ಲಿರುವ ಅಂಶಗಳು ಸಂಕ್ಷಿಪ್ತವಾಗಿ ಹೇಳುವುದಾದರೆ,

- ಚಾರಣಿಗರು ಚಾರಣ ಮಾಡಲು ಹೆಚ್ಚು ಸಮಯ ತೆಗೆದುಕೊಳ್ಳುವುದರಿಂದ, ವನ್ಯಜೀವಿಗಳ ಮುಕ್ತ ಸಂಚಾರಕ್ಕೆ ಹಾಗೂ ನೆಮ್ಮದಿಯ ಜೀವನಕ್ಕೆ ತೊಂದರೆಯಾಗುತ್ತಿರುತ್ತದೆ.
- ಚಾರಣಿಗರು ಆನ್ಲೈನ್ ಬುಕಿಂಗ್‌ನಿಂದ ಹಾಗೂ ಚಾರಣ ಮಾಡುವ ವ್ಯವಸ್ಥೆಯಿಂದ ಬೇಸರ ಹಾಗೂ ಅಸಮಧಾನ ವ್ಯಕ್ತ ಪಡಿಸುತ್ತಿರುತ್ತಾರೆ. ಚಾರಣಿಗರ ಸುರಕ್ಷತೆ ಮತ್ತು ಭದ್ರತೆಗೆ ಕೂಡ ಹಾನಿಯಾಗುವ ಸಂಭವವಿರುತ್ತದೆ.
- ಸಿಬ್ಬಂದಿಗಳ ಸಾಮರ್ಥ್ಯ/ ಸಮಯ ವ್ಯರ್ಥವಾಗುತ್ತಿರುತ್ತದೆ. ಅಲ್ಲದೇ, ಹೆಚ್ಚುವರಿ ಸಿಬ್ಬಂದಿಗಳ ಅವಶ್ಯಕತೆ ಉಂಟಾಗುತ್ತದೆ.
- Eco- tourisum ಆದಾಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿರುತ್ತದೆ.

ಸದರಿ ವ್ಯವಸ್ಥೆಯ ಕುರಿತು ಇರುವ ಪ್ರತಿಕ್ರಿಯೆಗಳು/ಅಭಿಪ್ರಾಯಗಳು ತಮ್ಮ ಅವಗಾಹನೆಗೆ ಹಾಗೂ ಮುಂದಿನ ಕ್ರಮಕ್ಕಾಗಿ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.

ಅಡಕ: 1. ಉಪ ವಲಯ ಅರಣ್ಯಾಧಿಕಾರಿಯವರ ವರದಿಯ ಪ್ರತಿ

2. ಸಾಮಾಜಿಕ ಜಾಲತಾಣಗಳಲ್ಲಿ ಚಾರಣಿಗರ ಅನಿಸಿಕೆ/ಅಭಿಪ್ರಾಯದ ಪ್ರತಿ

"ವಂದನೆಗಳೊಂದಿಗೆ"

ತಮ್ಮ ನಂಬುಗೆಯ,

ವಲಯ ಅರಣ್ಯಾಧಿಕಾರಿ,
ಪುಷ್ಪಗಿರಿ ವನ್ಯಜೀವಿ ವಲಯ
ಸೋಮವಾರಪೇಟೆ

Trekkers: /2024-25

ಅನುಬಂಧ-3



ಸಂಖ್ಯೆಪ್ರಮುಅಸಂ(ವಜೀ)/ಬಿ2/ ಸಿಆರ್-34/2023-24
E-office- 1245934

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ)
ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು, ಕರ್ನಾಟಕ
ಅರಣ್ಯ ಭವನ, 2ನೇ ಮಹಡಿ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ, 1ನೇ ಮಹಡಿ
ಕಛೇರಿ: 080-23341993 080-23345846
E-mail pccfwl@gmail.com
ಬೆಂಗಳೂರು-03, ದಿನಾಂಕ: 23 .08.2024

"ಸುತ್ತೋಲೆ"

**ವಿಷಯ:** ಅರಣ್ಯದೊಳಗೆ ಏಕ ಬಳಕೆ ಪ್ಲಾಸ್ಟಿಕ್ ಉತ್ಪನ್ನವನ್ನು ನಿಷೇಧಿಸುವ ವ್ಯವಸ್ಥೆ ಜಾರಿಗೆ ತಂದು ವನ ಮತ್ತು ವನ್ಯಮೃಗಗಳ ಸಂರಕ್ಷಣೆ ಮಾಡುವ ಬಗ್ಗೆ

**ಉಲ್ಲೇಖ:** ಸರ್ಕಾರದ ಪತ್ರ ಸಂಖ್ಯೆ: ಅಪಜೀ 65 ಎಫ್‌ಡಬ್ಲ್ಯೂಎಲ್ 2024 ದಿನಾಂಕ: 25.07.2024
ಈ ಕಚೇರಿ ಪತ್ರ ಸಂಖ್ಯೆ ಪ್ರಮುಅಸಂ(ವಜೀ)/ಡಿ/ಸಿಆರ್-08/2022-23 ದಿನಾಂಕ: 27.06.2024

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಸರ್ಕಾರದ ಪತ್ರದಲ್ಲಿ ಮಾನ್ಯ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ನಿರ್ದೇಶನದಂತೆ ಏಕ ಬಳಕೆ ಪ್ಲಾಸ್ಟಿಕ್ ತ್ಯಾಜ್ಯ ಪರಿಸರಕ್ಕೆ ಮಾರಕವಾಗಿದ್ದು, ಏಕ ಬಳಕೆ ಉತ್ಪನ್ನಗಳಾದ ಕ್ಯಾರಿಬ್ಯಾಗ್, ನೀರಿನ ಬಾಟಲಿ,ಚಿಪ್ಸ್ ಪೊಟ್ಟಣ ಇತ್ಯಾದಿ ಅರಣ್ಯ ಪ್ರದೇಶವನ್ನು ಪ್ರವೇಶಿಸುತ್ತಿದ್ದು, ವನ್ಯ ಮೃಗಗಳು ಇದನ್ನು ತಿನ್ನುವಂತಾಗಿರುವುದು ಆತಂಕದ ವಿಷಯವಾಗಿರುತ್ತದೆ. ಅರಣ್ಯದೊಳಗಿನ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿಗಳಲ್ಲಿ ಸಾಗುವ ಕಾರು, ಬಸ್ ಇತ್ಯಾದಿಗಳಲ್ಲಿ ಪ್ರಯಾಣಿಸುವ ಪ್ರವಾಸಿಗರು/ ಪ್ರಯಾಣಿಕರು ಬಳಸಿದ ನೀರಿನ ಬಾಟಲಿ, ಕ್ಯಾರಿಬ್ಯಾಗ್ ಅನ್ನು ಕಾಡಿನಲ್ಲಿ ಎಸೆಯುತ್ತಿರುವುದು ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತಿದೆ. ನಾಗರಹೊಳೆ ಮತ್ತು ಬಂಡೀಪುರ ವಲಯದಲ್ಲಿ ವನ್ಯಪ್ರದೇಶದಿಂದ ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಿಸಲು ವಾಹನ ಮತ್ತು ಸಿಬ್ಬಂದಿ ವ್ಯವಸ್ಥೆ ಮಾಡುವ ಸ್ಥಿತಿ ನಿರ್ಮಾಣವಾಗಿದೆ. ಕಾಡಿನೊಳಗೆ ಸಿಬ್ಬಂದಿ 'ಇಳಿದು ತ್ಯಾಜ್ಯ ತೆಗೆಯುವಾಗ ಕಾಡು ಪ್ರಾಣಿಗಳು ದಾಳಿ ಮಾಡುವ ಸಾಧ್ಯತೆಯೂ ಇರುವ ಕಾರಣ ಪ್ಲಾಸ್ಟಿಕ್ ತ್ಯಾಜ್ಯ ವನ್ಯ ಪ್ರದೇಶ ಪ್ರವೇಶಿಸದಂತೆ ಈ ಕೆಳಕಂಡ ತಪಾಸಣಾ ವ್ಯವಸ್ಥೆಯನ್ನು ಕಡ್ಡಾಯವಾಗಿ ಜಾರಿಗೊಳಿಸತಕ್ಕದ್ದು. ಈ ಸಂಬಂಧ ಉಲ್ಲೇಖ (2) ರ ಈ ಕಚೇರಿ ಪತ್ರ ದಿನಾಂಕ: 27.06.2023 ರಲ್ಲಿ ಪರಿಸರ ಸ್ನೇಹಿ ಜೂಟ್ ಹಾಗೂ ಇತರ ಕಾಂಪೋಸ್ಟಬಲ್ ಸಾಮಗ್ರಿಗಳಿಂದ ತಯಾರಿಸಲಾದ ಬ್ಯಾಗ್ ಹಾಗೂ ಮೆಟಲ್ ಅಥವಾ ನ್ಯಾಚುರಲ್ ಫೈಬರ್ ನಿಂದ ತಯಾರಿಸಲಾದ ವಾಟರ್ ಬಾಟಲ್ ಉಪಯೋಗಿಸುವಂತೆ ನೀಡಲಾದ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರ ಜೊತೆಗೆ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

1. ಅರಣ್ಯ ಮತ್ತು ವನ್ಯಪ್ರದೇಶಗಳಿಗೆ ಭೇಟಿ ನೀಡುವ ಪ್ರವಾಸಿಗರು ಮತ್ತು ಪ್ರಯಾಣಿಕರಿಗೆ ಸ್ವಯಂಪ್ರೇರಿತವಾಗಿ ತಮ್ಮ ವಾಹನದಲ್ಲಿ ಏಕ ಬಳಕೆ ಪ್ಲಾಸ್ಟಿಕ್ ಉತ್ಪನ್ನವನ್ನು ಅರಣ್ಯದ ಹೊರವಲಯದಲ್ಲಿ ಇಟ್ಟಿರುವ ಕಸದ ಬುಟ್ಟಿಗೆ ಹಾಕುವುದನ್ನು ಕಡ್ಡಾಯವಾಗಿ ಪರಿಶೀಲಿಸತಕ್ಕದ್ದು.
2. ಇಲಾಖೆಯ ಸಿಬ್ಬಂದಿ ಟೋಲ್ ಬಳಿ ತಪಾಸಣೆ ಮಾಡಿ. ಒಂದೊಮ್ಮೆ ವಾಹನಗಳಲ್ಲಿ ಬಸ್ ಪ್ರಯಾಣಿಕರ ಬಳಿ ಪ್ಲಾಸ್ಟಿಕ್ ಬಾಟಲಿ, ಮದ್ಯದ ಬಾಟಲಿ, ಕ್ಯಾರಿಬ್ಯಾಗ್, ಚಿಪ್ಸ್ ಪ್ಯಾಕೆಟ್ ಇತ್ಯಾದಿ ಕಂಡು ಬಂದರೆ ದಂಡ ಹಾಕುವ ವ್ಯವಸ್ಥೆ ಜಾರಿಗೆ ತಂದು ವನ ಮತ್ತು ವನ್ಯಮೃಗಗಳ ಸಂರಕ್ಷಣೆ ಮಾಡತಕ್ಕದ್ದು.

Signed by
Subhash K Malkhede
Date: 26-08-2024 17:08:49
ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ)
ಮತ್ತು ವನ್ಯಜೀವಿ ಪರಿಪಾಲಕರು,
ಕರ್ನಾಟಕ, ಬೆಂಗಳೂರು

ಪ್ರತಿಯನ್ನು ಈ ಕೆಳಕಂಡವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

1. ಎಲ್ಲಾ ಮುಖ್ಯ/ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರಾದೇಶಿಕ ವೃತ್ತಗಳು

2. ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರು, ಹುಲಿ ಸಂರಕ್ಷಿತ ಪ್ರದೇಶಗಳು
3. ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ವನ್ಯಜೀವಿ ವಿಭಾಗಗಳು
4. ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರಾದೇಶಿಕ ವಿಭಾಗಗಳು

ಅನುಬಂಧ-4

## Determination of Carrying Capacity for trek routes in Pushpagiri Wildlife Sanctuary (PWLS)

Pushpagiri WLS has two trekking routes.

1. Beedahalli to Kumaraparvata peak.
2. Subramanya to Kumaraparvata peak.

### 1. Carrying Capacity of Kumaraparvatha Peak (Pushpagiri Peak) from Beedahalli (Somwarpete) :

**Physical Carrying Capacity (PCC) :**

The basic information and criteria for the physical carrying capacity calculation are given below:

- The visitor can also be from either beginning of the route. Access to the starting points is planned using the existing roads. The carrying capacity calculation was made for one direction.
- A length of 1m is required for each person on the route.
- The walkway is at least 1.2m wide as the route cross section. In this case, each visitor will occupy $1.2m^2$ area.
- The minimum distance between two groups is estimated to be 50m.
- The maximum number of people in each group is 10 people.
- When observations and rest intervals are added, the average walking time is **6 hours**.
- The area is open 12 hours a day (6.00 – 18.00).
- The average length of the sightseeing line is approximately **7000 mtr.**

10 meters long trip line will be needed for 10 visitors. When a distance of 50m is planned between groups, 117 groups can be found on the same route.

These 117 groups will occupy a total of $1404m^2$ (117x10x1.2) of sightseing area while they are on the same route.

A person can visit this area 2.0 times a day (12/6) since the sightseeing line is open for 12 hours and each visit lasts 6 hours (total 12/6 hours).

$$PCC = A \times V/a \times Rf$$
$$PCC = 1404x(1/1.2)x2.0$$
$$PCC = 2339.99$$
$$\mathbf{PCC = 2340}$$

**Real Carrying Capacity (RCC) :**
The RCC value can be expressed by the folowing equation

$$RCC = PCC\text{-}Cf1\text{-}Cf2 \ldots\ldots\ldots\ldots Cfn.$$

Correction factor analysis is given below. Correction factors related to landscape function analyzes as ecological constraints are taken into account in the analysis of carrying capacity.

**1. Heavy Rainy days correction Factor**

M1= 50 heavy rainy days (Between June- September 4 months)
M1= 365 total days in a year
Cf_scd= (50x100)/(365)=**10%**(approximate)

**2. Wildlife disturbance Correction Factor**

Correction factor for Pushpagiri tourism zone

Corrective factor for ungulates (Sambar, Deer & Bison) = 2/9*100=22.22%
Corrective factor for Leopard & Tiger = 2/9*100`= 22.22%
Overall corrective factor for disturbance of wildlife in Pushpagiri WLS,
Cfw = Cf1 + Cf2 = 22.22+22.22 = **44.44 %**

**3. Temporary Closed Days Correction Factor**

It is assumed that the project area can be closed for maintenance purposes/weather/fire season etc., for up to 4 weeks per year.
M1 = 28 temporary closed days (Between January - December, 12months)
Mt = 365 total days in a five month period (12x4)
Cf_tcd= (28×365)/(100)= **7.67%**

**4. Steep Terrain Correction Factor**

Half of the trek route is steep. It is assumed to be having greater slope angle and subjected to road erosion.
Total length of the trek – 7 kms
Length of the trek suffering Erosion risk – 1km
1/7x100 = **14.28%**

**A summary of different correction factors in PWLS is given below:**

1. Rainy days correction factor: 10%
2. Wildlife disturbance correction Factor: 44.44%
3. Temporary Closed Days Correction Factor: 7.67%
4. Steep Terrain erosion risk Correction Factor 14.28%

The equation used in the calculation of RTK values is as follows:

RCC=PCC ×(100-Cf_rd)/100 × (100-Cf_wt)/100 × (100-Cf_tcd)/100×(100-Cf_st)/100
RCC=PCC ×(100-10)/100 × (100-44.4)/100 × (100-7.67)/100× (100-14.28)/100
RCC=PCC ×0.9 × 0.55 × 0.923 ×0.857
RCC=2340 ×0.391
RCC= 914.94
**RCC = 915**

**Effective permissible Carrying Capacity (ECC):**
ECC is the maximum number of visitors that a site can sustain given the management capacity (MC) available. ECC is obtained by multiplying the real carrying capacity with the management capacity. MC is defined as the sum of conditions that PA administration requires if it is to carry out its functions at the optimum level. Limitations in management like staff, waste generation, Ecological footprint, Remoteness in accebility for rescue etc., and infrastructure limit the RCC.

Therefore, MC is **40%.**

Hence, ECC = RCC * MC

ECC for Kumaraparvata trekking zone = 915 * 40%
= 366 trekkers/day
i.e. = **366 trekkers/day**

Thus, for **Kumaraparvata peak trek, from Beedahalli,** the Effective Permissible Carrying Capacity for on any single day is only approximate **366 trekkers/day.**

## 2.Carrying Capacity of Kumaraparvatha Peak (Pushpagiri Peak) from Subramanya:

**Physical Carrying Capacity (PCC) :**

The basic information and criteria for the physical carrying capacity calculation are given below:

- The visitor can also be from either beginning of the route. Access to the starting points is planned using the existing roads. The carrying capacity calculation was made for one direction.
- A length of 1m is required for each person on the route.
- The walkway is at least 1.2m wide as the route cross section. In this case, each visitor will occupy 1.2m$^2$ area.
- The minimum distance between two groups is estimated to be 50m.
- The maximum number of people in each group is 10 people.
- When observations and rest intervals are added, the average walking time is **10 hours.**
- The area is open 12 hours a day (6.00 – 18.00).
- The average length of the sightseeing line is approximately **12,000 mtr.**

10 meters long trip line will be needed for 10 visitors. When a distance of 50m is planned between groups, 200 groups can be found on the same route.

These 200 groups will occupy a total of 2400 m$^2$ (200x10x1.2) of sightseeing area while they are on the same route.

A person can visit this area 1.2 times a day (12/10) since the sightseeing line is open 12 hours and each visit lasts 10 hours (total 12/10 hours).

$$PCC = A \times V/a \times Rf$$

PCC= 2400*(1/1.2)*1.2
**PCC=2400**

**Real Carrying Capacity (RCC) :**

**1. Heavy Rainy days correction Factor**

Ml= 50 heavy rainy days (Between June- September 4 months)
Ml= 365 total days in a year
Cf_scd= (50x100)/(365)=**10%**(approximate)

**2. Wildlife disturbance Correction Factor**

Correction factor for Pushpagiri tourism zone

Corrective factor for ungulates (Sambar, Deer & Bison) = 2/9*100=22.22%
Corrective factor for Leopard & Tiger = 2/9*100 = 22.22%
Overall corrective factor for disturbance of wildlife in Pushpagiri WLS,

Cfw = Cf1 + Cf2 = 22.22+22.22 = **44.44 %**

**3. Temporary Closed Days Correction Factor**

It is assumed that the project area can be closed for maintenance purposes/weather/fire season etc., for up to 4 weeks per year.
Ml = 28 temporary closed days (Between January - December, 12months)
Mt = 365 total days in a five month period (12x4)
Cf_tcd= (28×365)/(100)= **7.67%**

**4. Steep Terrain Correction Factor**

Half of the trek route is steep. It is assume to be having greater slope angle and subjected to road erosion.
Total length of the trek – 12 kms
Length of the trek suffering Erosion risk – 3 km
3/12x100 = **25%**

A summary of different correction factors is given below:
1. Rainy days correction factor: 10%
2. Wildlife threat Correction Factor: 44.44%
3. Temporary Closed Days Correction Factor : 7.67%
4. Steep Terrain Correction Factor : 25%

The equation used in the calculation of RTK values is as follows:-
RCC=PCC ×(100-Cf_rd)/100 × (100-Cf_wt)/100 × (100-Cf_tcd)/100×(100-Cf_st)/100
RCC=PCC ×(100-10)/100 × (100-44.4)/100 × (100-7.67)/100× (100-25)/100
RCC=2400 × 0.9 × 0.55 × 0.923 × 0.75
RCC=2400 × 0.342
**RCC= 822.39**

**Effective permissible Carrying Capacity (ECC):**
ECC is the maximum number of visitors that a site can sustain given the management **capacity (MC)** available.

**Therefore, MC is 40%.**

Hence, ECC = RCC * MC

ECC for Kumaraparvata trekking zone = 822.39 * 40%
= 328.95 trekkers/day
i.e. = **329 trekkers/day**

Thus, for **Kumaraparvata peak trek, from Subramanya** side, the Effective Permissible Carrying Capacity for on any single day is only approximate **329 trekkers/day.**